ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಗೃಹ ಮಂತ್ರಿಗಳಿಂದ ಪರವಾಗಿ ತರಿಸಿ ಅವರಿಗೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು.—ಶ್ರೀ ಗೋಪಾಲ ಮುಕುಂದ ಕಾನಡೆ.—ಸದಸ್ಯರು ಗೈರು ಹಾಜರಿ.

(೧೮) ಅಫಜಲಪುರ ತಾಲ್ಲೂಕು ಅತನೂರು, ನೀಲೂರು, ಬಳೂರ್ಗಿ, ಗ್ರಾಮಗಳಿಗೆ ಪೈಪ್‌ಲೈನ್ ಮೂಲಕ ನೀರನ್ನು ಒದಗಿಸುವುದು

ಶ್ರೀ ಪಾಲೀಕಯ್ಯ ವಿ. ಗುತ್ತೇದಾರ.—ಮಾನ್ಯ ಅಧ್ಯಕ್ಷರೇ, ಅಫಜಲಪುರ ತಾಲ್ಲೂಕಿನ ಅತನೂರು, ನೀಲೂರು, ಬಳೂರ್ಗಿ, ಗ್ರಾಮಗಳು ನಾಲ್ಕು ಸಾವಿರ ಜನಸಂಖ್ಯೆ ಉಳ್ಳ ಗ್ರಾಮಗಳು ಆಗಿದ್ದು, ಆಲ್ಲಿಯ ಕೊಳವೆ ಬಾವಿಗಳು ಬತ್ತಿ ಹೋಗಿದ್ದರಿಂದ ಸಾರ್ವಜನಿಕರಿಗೆ ನೀರಿನ ತೊಂದರೆ ಯಾಗುತ್ತಿದೆ. ಈ ಪರಿಸ್ಥಿತಿಯನ್ನು ಕಂಡು ಎರಡು ಕಿ. ಮೀ. ದೂರದ ಮೇಲೆ ಕೊಳವೆ ಬಾವಿಗಳನ್ನು ತೋಡಿಸಿದ್ದೇವೆ. ದೇವರ ದಯದಿಂದ ಆಲ್ಲಿ ಚೆನ್ನಾಗಿ ನೀರು ಬಿದ್ದಿದೆ. ಆದರೆ ಆಲ್ಲಿಂದ ಊರು ಹೊರಗೆ ಪೈಪ್‌ಲೈನ್ ಮುಖಾಂತರ ಟ್ಯಾಂಕಿಗೆ ನೀರು ಒದಗಿಸಲು ಆಧಿಕಾರಿಗಳು ಹಣ ಕೊರತೆ ಇದೆ ಎಂದು ಹೇಳುತ್ತಿದ್ದಾರೆ. ಈ ಪ್ರತಿಯೊಂದು ಯೋಜನೆಗೆ ೬೦ ಸಾವಿರದಿಂದ ಒಂದು ಲಕ್ಷದವರೆಗೆ ಅಂದಾಜು ವೆಚ್ಚವಾಗುತ್ತದೆ. ಆದ್ದರಿಂದ ತಾವು ೩ ಲಕ್ಷ ಹಣ ಮಂಜೂರು ಮಾಡಿ ಈ ಜನರ ನೀರಿನ ತೊಂದರೆ ನಿವಾರಣೆ ಮಾಡಬೇಕಾಗಿ ವಿನಂತಿ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಕೂಡಲೇ ಹಣವನ್ನು ಒದಗಿಸಲು ಆದೇಶ ಕೊಡುತ್ತೇನೆ.

(೧೯) ಮಂಗಳೂರಿನ ಬಜ್ಪೆ ನಿಲ್ದಾಣದಿಂದ ಬಸ್‌ಗಳನ್ನು ಕೊಡಿಯಾಲ್ ಬೈಲ್, ಹಂಪನಕಟ್ಟೆ ಮೂಲಕ ಒಡಿಸುವುದು

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ ಮಂಗಳೂರಿನ ಬಜ್ಪೆಯಲ್ಲಿ ಹೊಸದಾಗಿ ನಿರ್ಮಿಸಿದ ಬಸ್ ನಿಲ್ದಾಣ ಉದ್ಘಾಟನೆಯಾಗಿ ನಾಲ್ಕು ತಿಂಗಳು ಕಳೆಯಿತು. ಈ ನಿಲ್ದಾಣ ಮಂಗಳೂರಿನ ಕೇಂದ್ರ ಸ್ಥಾನವಾದ ಹಂಪನಕಟ್ಟೆಯಿಂದ ನಾಲ್ಕು ಕಿಲೋ ಮೀಟರ್ ದೂರದಲ್ಲಿರುವುದರಿಂದ ಹಂಪನಕಟ್ಟೆಯಲ್ಲಿ ಜಮೆಯಾದ ಪ್ರಯಾಣಿಕರಿಗೆ ಅವರವರ ಸ್ಥಳಗಳಿಗೆ ಹೋಗಲು ತುಂಬಾ ಕಷ್ಟ. ರಿಕ್ಷಾ ಮಾಡಿ ಬಜ್ಪೆಗೆ ಹೋಗಬೇಕಾದರೆ ೪ ರಿಂದ ೫ ರೂಪಾಯಿಗಳು ಬೇಕು. ಬಜ್ಪೆ ಬಸ್ ನಿಲ್ದಾಣದಿಂದ ಹೊರಡುವ ಎಲ್ಲಾ ಸರಕಾರಿ ಬಸ್ಸುಗಳು ಜ್ಯೋತಿ ಸರ್ಕಲಿಗಾಗಿ ಈಗ ಹೋಗುತ್ತಿವೆ. ಇದನ್ನು ಬಜ್ಪೆಯಿಂದ ಕೊಡಿಯಾಲಬೈಲಿಗಾಗಿ ಸದಾಶಿವರಾವ್ ರಸ್ತೆಗಾಗಿ ಹಂಪನಕಟ್ಟೆಯಿಂದ ತಿರುಗಿ ಹೋಗುವಂತೆ ಮಾಡಬೇಕು. ಹೀಗೆ ಮಾಡುವುದರಿಂದ ನೂರಾರು ಪ್ರಯಾಣಿಕರು ಹಂಪನಕಟ್ಟೆಯಲ್ಲಿ ಬಸ್ಸುಗಳಿಗೆ ಸಿಗುತ್ತಾರೆ. ಪ್ರಯಾಣಿಕರು ಮೆಟಡೋರ್, ಟ್ಯಾಕ್ಸಿ ಮಾಡಿ ದುಬಾರಿಯಾಗಿ ಹೋಗುವುದರ ಬದಲು ಸರ್ಕಾರಿ ಬಸ್ಸುಗಳು ಹಂಪನಕಟ್ಟೆಗೆ ಬಂದರೆ ಪ್ರಯಾಣಿಕರಿಗೆ ಉಪಕಾರವೂ, ಹಣದ ಉಳಿಕೆಯೂ ಆಗುತ್ತದೆ ಸರಕಾರಿ ಬಸ್ಸಿನವರಿಗೂ ಹೆಚ್ಚಿಗೆ ಉತ್ಪತ್ತಿ ಆಗುತ್ತದೆ. ಇದು ಬಹಳ ಉಪಯುಕ್ತ ಕ್ರಮ ವಾಗುವುದು. ಈ ಕುರಿತು ನಾರಿಗೆ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಸಾರಿಗೆ ಸಚಿವರಿಂದ ಉತ್ತರವನ್ನು ತರಿಸಿ ಕೊಡುತ್ತೇನೆ.

ಅಧ್ಯಕ್ಷರು.—ಶ್ರೀ ಸಿ. ಎಂ. ಉದಾಸಿ.—ಸದಸ್ಯರು ಗೈರು ಹಾಜರಿ.

(೨೦) ಮೈಸೂರು ಜಿಲ್ಲೆಯಲ್ಲಿ. ಪಟೇಲರು ಮತ್ತು ಶ್ಯಾನುಭೋಗರುಗಳಿಗೆ ಮಾಶಾಸನ ಕೊಡುವುದು.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಅನೇಕ ಪಟೇಲರು, ಶ್ಯಾನುಭೋಗರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಕಾಲಕಾಲಕ್ಕೆ ಸರಿಯಾಗಿ ಕಂದಾಯ ಆಧಿಕಾರಿಗಳು ರಿಜಿಸ್ಟರನ್ನು ನವೀಕರಿಸದಿದ್ದರಿಂದ ಮಾಸಾಶನ ಕೊಡುವುದನ್ನು ಕೈಬಿಡಲಾಗಿದೆ. ಆದ್ದರಿಂದ ಕರ್ನಾಟಕ ಸರಕಾರ ೧೯೬ ಫೆಬ್ರುವರಿ ೧೯೬೫ರಿಂದು ಕೆಲಸ ಮೇಲೆ ಇವ್ವಂತಹ ಪಟೇಲರು ಹಾಗೂ ಶ್ಯಾನುಭೋಗರುಗಳಿಗೆ ಅನ್ವಯವಾಗುವಂತೆ ಮಾಡಿ ಮಾಸಾಶನ ಕೊಡಲು ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

ಆದ್ದರಿಂದ ಅವರ ಮನವಿಯಂತೆ ಮಾಸಾಶನವನ್ನು ಕೊಡುವುದು ಸೂಕ್ತವಾಗಿರುತ್ತದೆ. ಈ ವಿಚಾರವಾಗಿ ಮೈಸೂರು ಜಿಲ್ಲಾಧಿಕಾರಿಗಳು ದಿನಾಂಕ ೫ನೇ ಜನವರಿ ೧೯೮೭ರಂದು ಕಂದಾಯ ಆಯುಕ್ತರಿಗೆ ಮಾಸಾಶನ ಕೊಡಲು ಆದೇಶ ಹೊರಡಿಸಬೇಕೆಂದು ಪತ್ರ ಬರೆದು ಕೋರಿರುವುದನ್ನು ಈ ಸಂದರ್ಭದಲ್ಲಿ ಸ್ಮರಿಸಲಿಚ್ಛಿಸುತ್ತೇನೆ. ಆದ್ದರಿಂದ ಅತ್ಯಂತ ತೊಂದರೆಯಲ್ಲಿರುವ ಪಟೇಲರು ಮತ್ತು ಶ್ಯಾನುಭೋಗರುಗಳಿಗೆ ಕೂಡಲೇ ಮಾಸಾಶನ ಕೊಡಲು ಸರಕಾರ ಕ್ರಮ ತೆಗೆದುಕೊಳ್ಳಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ. ಆದ್ದರಿಂದ ಕೂಡಲೇ ಸರಕಾರ ಮಾಸಾಶನ ಕೊಡಲು ಕ್ರಮ ಕೈಕೊಳ್ಳಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಮಾನ್ಯ ಕಂದಾಯ ಮಂತ್ರಿಗಳ ಪರವಾಗಿ ಉತ್ತರವನ್ನು ಕೊಡುತ್ತೇನೆ.

ಕರ್ನಾಟಕ ಗ್ರಾಮಾಧಿಕಾರಿಗಳ ರದ್ದಿಯಾತಿ ಕಾಯಿದೆ ೧೯೬೧ರ ೪ನೇ ಅಧಿನಿಯಮದನ್ವಯ ಕೆಳದರ್ಜೆ ಗ್ರಾಮ ನೌಕರರು ಸೇರಿದಂತೆ ಎಲ್ಲಾ ವರ್ಗದ ಗ್ರಾಮ ನೌಕರರು ಮತ್ತು ಗ್ರಾಮಾಧಿಕಾರಿಗಳ ಹುದ್ದೆಗಳನ್ನು ದಿನಾಂಕ ೧ನೇ ಫೆಬ್ರುವರಿ ೧೯೬೩ರಿಂದ ರದ್ದು ಪಡಿಸಲಾಗಿದೆ.

ಮಾನವೀಯ ಆಧಾರದಿಂದ ಸರ್ಕಾರವು ತನ್ನ ಆದೇಶ ಸಂಖ್ಯೆ ಆರ್‌ಡಿ ೧೮೨ ಎಂವಿಎಸ್ ೭೭ ದಿನಾಂಕ ೩೧ನೇ ಜುಲೈ ೧೯೭೯ರ ಮೂಲಕ ಹಲವು ಷರತ್ತುಗಳಿಗೆ ಒಳಪಟ್ಟು ದಿನಾಂಕ ೧ನೇ ಆಗಸ್ಟ್ ೧೯೭೯ರಿಂದ ಜಾರಿಗೆ ಬರುವಂತೆ ಮಾಸಿಕ ೧೦೦-೦೦ ರೂಪಾಯಿಗಳ ಅನುಪಂಶೀಯ ಹಕ್ಕುಗಳನ್ನು ಕಳೆದುಕೊಂಡ ಶ್ಯಾನುಭೋಗರುಗಳಿಗೆ ಅನುಕಂಪ ಭತ್ಯೆಯನ್ನು ಮಂಜೂರು ಮಾಡಲಾಗಿದೆ.

ಅಂತೆಯೆ ಸರ್ಕಾರವು ತನ್ನ ಆದೇಶ ಆರ್‌ಡಿ ೪೪೩ ಎಂವಿಎಸ್ (೧) ೮೨ ದಿನಾಂಕ ೨೦ನೇ ಸೆಪ್ಟೆಂಬರ್ ೧೯೮೪ರನ್ವಯ ಅನುವಂಶೀಯ ಹಕ್ಕುಗಳನ್ನು ಕಳೆದುಕೊಂಡ ಮಾಜಿ ಪಟೇಲರುಗಳಿಗೂ ಸಹ ಹಲವು ಷರತ್ತುಗಳಿಗೆ ಒಳಪಟ್ಟು ದಿನಾಂಕ ೧೫ನೇ ಆಗಸ್ಟ್ ೧೯೮೪ರಿಂದ ಜಾರಿಗೆ ಬರುವಂತೆ ಮಾಸಿಕ ೧೦೦-೦೦ ರೂಪಾಯಿಗಳ ಅನುಕಂಪ ಭತ್ಯೆಯನ್ನು ಮಂಜೂರು ಮಾಡಲಾಗಿದೆ.

ಪ್ರಸ್ತುತ, ವಿಧಾನಸಭಾ ಸದಸ್ಯರಾದ ಶ್ರೀ ಎಂ. ಶಿವಣ್ಣನವರು ತಮ್ಮ ಮೇಲ್ಕಂಡ ಸೂಚನಾ ಪತ್ರದಲ್ಲಿ ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಅನೇಕ ಪಟೇಲರು, ಶಾನುಭೋಗರುಗಳು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿ ಕಂದಾಯ ಅಧಿಕಾರಿಗಳು ಕಾಲ ಕಾಲಕ್ಕೆ ಸರಿಯಾಗಿ ರಿಜಿಸ್ಟರುಗಳನ್ನು ನವೀಕರಿಸದಿದ್ದ ಕಾರಣ ಸದರಿಯವರುಗಳ ಹೆಸರುಗಳನ್ನು ಕೈಬಿಡಲಾಗಿದೆಯೆಂದು ತಿಳಿಸುತ್ತಾ ೧ನೇ ಫೆಬ್ರುವರಿ ೧೯೬೩ರಂದು ಕೆಲಸದ ಮೇಲೆ ಇದ್ದಂತಹ ಪಟೇಲರು ಶ್ಯಾನುಭೋಗರುಗಳಿಗೆ ಅನ್ವಯ ಪಾಗುವಂತೆ ಕೂಡಲೇ ಮಾಹೆಯಾನ ೧೦೦-೦೦ ರೂಪಾಯಿಗಳ ಅನುಕಂಪ ಭತ್ಯೆಯನ್ನು ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಪ್ರಸ್ತಾಪಿಸಿದ್ದಾರೆ. ಸಂಬಂಧಿಸಿದಂತೆ ಮೈಸೂರು ಜಿಲ್ಲಾಧಿಕಾರಿಗಳ ಪತ್ರ ದಿನಾಂಕ ೫ನೇ ಜನವರಿ ೧೯೮೭ನ್ನು ಸಹ ಉಲ್ಲೇಖಿಸಿದ್ದಾರೆ.

ಗ್ರಾಮಾಧಿಕಾರಿಗಳಿಗೆ ಆಗಿರುವ ತೊಂದರೆಯು ಕಂದಾಯ ಅಧಿಕಾರಿಗಳು ರಿಜಿಸ್ಟರುಗಳನ್ನು ಕಾಲಕಾಲಕ್ಕೆ ನವೀಕರಿಸದಿದ್ದುದರಿಂದಲೇ ಆಗಿದ್ದ ಪಕ್ಷದಲ್ಲಿ ಇದರ ಬಗ್ಗೆ ಸರ್ಕಾರದ ಆದೇಶಗಳೇನೂ ಬೇಕಾಗಿರುವುದಿಲ್ಲ. ರಿಜಿಸ್ಟರ್ ನವೀಕರಿಸದಿರುವುದಕ್ಕೆ ಅನುವಂಶೀಯ ಹಕ್ಕುಗಳನ್ನು ಕಳೆದುಕೊಂಡ ಎಲ್ಲ ಗ್ರಾಮಾಧಿಕಾರಿಗಳಿಗೆ (ಶ್ಯಾನುಭೋಗರು / ಪಟೇಲರು) ೧ನೇ ಫೆಬ್ರುವರಿ ೧೯೬೩ರಲ್ಲಿ ಇದ್ದಂತೆ ನವೀಕರಿಸಿ ಉಲ್ಲೇಖಿತ ಸರ್ಕಾರಿ ಆದೇಶಗಳ ರೀತ್ಯ ಈಗಲೂ ಸಹ ಮಾಸಿಕ ಅನುಕಂಪ ಭತ್ಯೆಯನ್ನು ನೀಡಲು ಬರುತ್ತದೆ. ಅದಾಗ್ಯೂ ಸಹ ನಿರ್ದೇಶನಗಳನ್ನು ಮೈಸೂರು ಜಿಲ್ಲಾಧಿಕಾರಿಗಳಿಗೆ ನೀಡಲಾಗುತ್ತದೆ.

ಅಧ್ಯಕ್ಷರು.—ಪುನಃ ಪ್ರಶ್ನೆ ಕೇಳಲು ಬರುವುದಿಲ್ಲ. ನೀವು ಏನು ಹೇಳಿದರೂ ಅದು ರೆಕಾರ್ಡ್ ಆಗುವುದಿಲ್ಲ. ನಿಮಗೆ ಹೊಸದಾಗಿ ನಾವು ಹೇಳಿಕೊಡಬೇಕೆ?

(ಪುನಃ ಪಸಂತ ಬಂಗೇರ, ಕಾಂತಾ, ಉದಾಸೆ ಮತ್ತು ಖಾನಡೆಯವರನ್ನು ರೂಲ್ ೩೫೪ರ ಕೆಳಗಿನ ಪ್ರಶ್ನೆಗಳನ್ನು ಕೇಳಲು ಅಧ್ಯಕ್ಷರು ಕರೆದಾಗ ಯಾರೂ ಹಾಜರಿರಲಿಲ್ಲ)